ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ–೧೯೮೮ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ–೧೯೮೮ನ್ನು ತಿದ್ದುಪಡಿ ಮಾಡಿರಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೮

ಪರ್ಯಾಲೋಚನಾ ಪ್ರಸಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ದಿಮ್ದು ಪಡಿ) ವಿಧೇಯಕ–೧೯೮೮ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ೧೯೮೦ನೇ ಇಸವಿ ಏಪ್ರಿಲ್‌ಗೆ ಮೊದಲು ಇದ್ದ ತೆರಿಗೆಯ ಮಟ್ಟವನ್ನೇ ಈಗ ಈ ತಿದ್ದುಪಡಿ ಮಸೂದೆ ಮುಖಾಂತರ ತರುವ ಪ್ರಯತ್ನ ೧೯೮೮ರ ಏಪ್ರಿಲ್ ನಂತರ ತೆರಿಗೆ ಹಂತಗಳನ್ನು ಹೆಚ್ಚು ಮಾಡಿದ್ದೇವೆ. ನಂತರ ಈ ಉದ್ಯಮಕ್ಕೆ ಸಂಬಂಧ ಪಟ್ಟವರು ನೆರೆ ರಾಜ್ಯಗಳಲ್ಲಿ ತೆರಿಗೆ ಕಡಿಮೆ ಇದ್ದು ನೀವು ಜಾಸ್ತಿ ಮಾಡಿರುವುದರಿಂದ ನಮ್ಮ ಉದ್ಯಮಕ್ಕೆ ತೊಂದರೆ ಆಗುವುದರೆ ಜೊತೆಗೆ ವ್ಯವಹಾರ ಕೂಡಾ ಬೇರೆ ರಾಜ್ಯಗಳಿಗೆ ಹೋಗ ಬಹುದಾದ್ದರಿಂದ ತೆರಿಗೆ ಕಡಿಮೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಕೊಟ್ಟರು. ಅದನ್ನು ಗಮನದಲ್ಲಿ ಇಟ್ಟುಕೊಂಡು ತೆರಿಗೆ ಹಂತ ಕಡಿಮೆ ಮಾಡತಕ್ಕ ತಿದ್ದುಪಡಿ ತಂದಿದ್ದೇವೆ, ಇದನ್ನು ಈಗಾಗಲೇ ಜಾರಿಗೆ ಕೊಟ್ಟಿದ್ದು ಕೇವಲ ರ್ಯಾಟಿಫಿಕೇಷನ್‌ಗೆ ಇಲ್ಲಿ ತಂದಿದ್ದೇವೆ. ಆಯವ್ಯಯ ಕಾಲದಲ್ಲಿ ತೆರಿಗೆಗಳನ್ನು ಜಾಸ್ತಿ ಮಾಡತಕ್ಕ ಪ್ರಯತ್ನ ಗಳಾಗುತ್ತವೆ. ಅನೇಕ ಸಮಯದಲ್ಲಿ ಇಲ್ಲಿನ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟು ತೆರಿಗೆ ಮಟ್ಟ ಕಡಿಮೆ ಮಾಡಿರತಕ್ಕ ನಿದರ್ಶನಗಳು ಮಾನ್ಯ ಮೊಯಿಲಿಯವರ ಕಾಲದಲ್ಲೂ ನಡೆದಿವೆ. ಇದು ಆಪ್ರಕೃತ ವಿಚಾರವೇನಲ್ಲ ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ ಅನೇಕ ಸಂದರ್ಭಗಳಲ್ಲಿ ಕೇಂದ್ರವಾಗಲಿ, ರಾಜ್ಯವಾಗಲೀ ವಿಧಾನಮಂಡಲ ಅಧಿವೇಶನ ಇಲ್ಲದೇ ಇರತಕ್ಕ ಸಮಯದಲ್ಲಿ ಆದ್ಯಾ ದೇಶಗಳ ಮುಖಾಂತ ಕಾನೂನು ಜಾರಿಗೆ ತಂದಿರುವುದನ್ನು ನಾವು ಓದಿದ್ದೇವೆ. ತೆರಿಗೆಗಳ ಮೇಲೆ ಪ್ರತಿಕ್ರಿಯೆ ಬಂದಾಗ ಅದನ್ನು ಗಮನಿಸಿ ತೆರಿಗೆಯ ಹಂತಗಳನ್ನು ಹೆಚ್ಚು ಕಡಿಮೆ ಮಾಡಿರುವುದು ಅಪೇಕ್ಷಿತವೇನಲ್ಲ ಇದನ್ನು ಮಾನ್ಯ ಸದಸ್ಯರು ತಿಳಿಯದೇ ಇರತಕ್ಕ ವಿಷಯವಲ್ಲ ಮಾನ್ಯ ಮೊಯಿಲಿಯವರಿಗೆ ಇದನ್ನೆಲ್ಲಾ ನಾನು ನೆನಪು ಮಾಡಿಕೊಡುವ ಅಪಶ್ಯಕತೆಯಿಲ್ಲ ಅವರೂ ಆರ್ಥ ಮಂತ್ರಿಗಳಾಗಿದ್ದಾಗ ಕೂಡಾ ಈ ಎಲ್ಲಾ ಎಕ್ಸರ್‌ಸೈಸ್ ನಡೆದಿದೆ.

ಕೇಂದ್ರ ಸರ್ಕಾರದವರು ಈ ರೀತಿ ಮಾಡಿದ್ದಾರೆ. ಒಂದು ವರ್ಷದ ಹಿಂದೆ ಪೆಟ್ರೋಲ್ ಬೆಲೆ ಜಾಸ್ತಿಯಾಯಿತು ಎಂದೇ ಪಕ್ಷದ ವರಿಷ್ಠರೆಲ್ಲ ಸೇರಿ ಜಾಸ್ತಿ ಮಾಡಿದ್ದನ್ನು ಕಡಿಮೆ ಮಾಡಿದ್ದು ತಮಗೆ ಗೊತ್ತಿಲ್ಲದೆ ಇಲ್ಲ. ಉದ್ಯಮಗಳಲ್ಲಿರುವವರಿಗೆ ತೊಂದರೆಯಾಗಿದೆ ಎನ್ನುವ ಹಿನ್ನೆಲೆಯಲ್ಲಿ ಕಡಿಮೆ ಮಾಡತಕ್ಕ ಪ್ರಯತ್ನ ಮಾಡಿದ್ದೇವೆ. ಸನ್ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತೆರಿಗೆಯನ್ನು ಕಡಿಮೆ ಮಾಡತಕ್ಕದ್ದು ಸಾರಿಗೆ ವ್ಯವಸ್ಥೆಗೆ ಸ್ವಲ್ಪ ಸಂಲಲಿತವಾಗಿ ಒಂದು ತೀರ್ಮಾನವನ್ನು ಮಾಡತಕ್ಕದ್ದು ಏನಿದೆ ಅದನ್ನು ಸ್ವಾಗತ ಮಾಡಬೇಕು ಈ ಸದನವನ್ನು ಬಹಳ ಹಗುರವಾಗಿ ಸರ್ಕಾರದವರು ಕಾಣಬಾರದು. ಬಡ್ಜೆಟ್ ಮಾರ್ಚಿ ಫರ್ಸ್ಟ್‌ಗೆ

ಬರುತ್ತದೆ ಟ್ಯಾಕ್ಸ್ ಬದಲಾವಣೆ ಮಾಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಏನಾದರೂ ತಾವು ಕೊಡುತ್ತೀರಾ ? Are you going to give an assurance that you are not going to enhance the Motor Vehicles Tax in the coming budget ?

SRI A. LAKSHMI SAGAR.—No sensible Government will make a statement with regard to taxation policy which will hold good for all time to come. My hon'ble friend Mr. Moily is more experienced in the matter relating to finances and let him say whether there is any sensible Government which will be in a position to say for all time to come that we are not going to enhance the taxation level. I have already made my submission that after the rates were enhanced, the Government received representations, and when compared to the enhanced rates on these goods vehicles to the neighbouring rates at which the very same goods vehicles are being taxed, we found that the demands of the persons who are engaged in this trade were reasonable and therefore, the Government thought it fit to reduce it. This is all the point and this is a continuous exercise.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಾದರೆ ಇದನ್ನು ಯಾವ ಧೈರ್ಯದಲ್ಲಿ ಮಾಡಿದ್ದೀರಿ ?

SRI K. H. PATIL.—We have have understood you clearly. It is not our question that the Government should not enhance the tax at any time but what we want is are you going to assure this House that in the immediate budget, you are not going to increase it. This is what we want to know. Otherwise, you can wait for a month or so and you will have it.

SRI A. LAKSHMISAGAR.—I have already answerd this question. No sensible Government and responsible Government will make any such commitment with regard to taxation proposals. It may be reduced or it may be increased, I cannot say that. This is a continous exercise. The proposition I am venturing to emphasise is a proposition which is good for all time to come.

SRI M. VEERAPPA MOILY.—Is it the sensible Government if taxation proposals are brought every month, every hour an every day ? Is it a sensible Government which thinks of changing the tax structure every hour or every dav.

SRI A. LAKSHMISAGAR.—We are in 1988. I am not saying the taxation proposals will be tinkered every hour, every dayor every week or every month. Let us remember that they will have to be considereed in the light of the situation that would be existing at that point of time,

SRI M. VEERAPPA MOILY.—Let the Transport Minister come & explain. We must be convinced.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲಿಗೆ ಬರಬಾರದೆಂದೇನೂ ಇಲ್ಲ. ಇದರಲ್ಲಿ ಅಡಕವಾಗಿರತಕ್ಕ ಮೂಲ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಸರ್ಕಾರ ಕೈಗೊಂಡ ಹಿನ್ನೆಲೆಯನ್ನು ಹೇಳಿದ್ದೇನೆ. ಸನ್ಮಾನ್ಯ ಸದಸ್ಯರುಗಳು ಹಿರಿಯರು, ಹಿಂದೆ ಮಂತ್ರಿಗಳಾಗಿದ್ದವರು. ತೆರಿಗೆಯನ್ನು ಕಡಿಮೆ ಮಾಡುವುದಿಲ್ಲ. ಹೆಚ್ಚು ಮಾಡುವುದಿಲ್ಲವೆಂದು ಮುಖ್ಯ ಮಂತ್ರಿಯವರು ಹೇಳುವುದಕ್ಕಾಗುವುದಿಲ್ಲ, ಗಿರಿಗೆ ಮಂತ್ರಿಯೂ ಹೇಳುವುದಕ್ಕಾಗುವುದಿಲ್ಲ. ಯಾವ ಮಂತ್ರಿಯುಗಳು ಹೇಳುವುದಕ್ಕಾಗುವುದಿಲ್ಲ. ಅವರೂ ಸಹ ಮಂತ್ರಿಗಳಾಗಿದ್ದವರು. ಕೇಂದ್ರ ಸರ್ಕಾರದಲ್ಲಿ ಅವರ ಸರ್ಕಾರ ಇದೆ. ಬೇರೆ ಬೇರೆ ರಾಜ್ಯಗಳಲ್ಲಿ ಇವರ ಸರ್ಕಾರ ಇದೆ. ಎಲ್ಲರೂ ಒಂದೊಂದು ರೀತಿಯಲ್ಲಿ ಹೇಳಿರುವುದರಿಂದ ಈ ಹಿನ್ನೆಲೆಯಲ್ಲಿ ಒಂದು ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟಂತೆ, ತೆರಿಗೆ ವಿಷಯಕ್ಕೆ ಸಂಬಂಧಪಟ್ಟಂತೆ ಸಾರ್ವಕಾಲಿಕ ಯೋಜನೆಯನ್ನು ಪ್ರಸಾಪ ಮಾಡುವಂತಹ ದರವನ್ನು ಇಟ್ಟಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಲಕ್ಷ್ಮೀಸಾಗರ್‌ರವರ ವಿವೇಚನೆ ಬಹಳ ಚೆನ್ನಾಗಿ ಇದೆ. The most sensible Government will indulge in telling the people of the State that we are not going to levy taxes in the coming budget ? Since we have seen certain senseless orders by your Government we have entertained certain amount of doubts. ಮಾನ ಅಧ್ಯಕ್ಷರೇ ಇದರ ಬಗ್ಗೆ ಇಂಡಿಕೇಶನ್ ಕೊಟ್ಟಿಲ್ಲ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ನಡೆಯುತ್ತದೆ ಎನ್ನುವ ವಿಚಾರ ಸದನಕ್ಕೆ ಗೊತ್ತಾಗಬೇಕು. ಅದಕ್ಕಾಗಿಯೇ ಈ ಪ್ರಶ್ನೆ ಉದ್ಭವವಾಗುತ್ತದೆ. ಬಜೆಟ್ ಯಾವಾಗ ಇಡುತ್ತೀರಿ, ನಿಮಗೆ ಏನಾದರೂ ತಿಳಿಸಿದ್ದಾರೆಯೇ ?

ಅಧ್ಯಕ್ಷರು.—ನೋಡೋಣ, ಕೇಳಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ಬಜೆಟ್ ಇಡುತ್ತಾರೆ ?

ಅಧ್ಯಕ್ಷರು.—ನಮಗೆ ಗೊತ್ತಾದರೆ ತಮಗೆ ತಿಳಿಸುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನೇನು ಆಗುತ್ತದೆ ಎಂಬ ಬಗ್ಗೆ ತಮಗೂ ಗೊತ್ತಾಗುತ್ತದೆ. Please come to the subject.

SRI S. BANGARAPPA.—Infact the decisions taken at the Business Advisory Committee will have to be reported to this August House which you have not done.

ಅಧ್ಯಕ್ಷರು.—ಆಯಿತು, ಆಯಿತು. ಈಗ ಬಿಲ್ಲಿನ ಬಗ್ಗೆ ಮಾತನಾಡಿ. ಬಿಸಿನೆಸ್ ಅಡ್ವೈಸರಿ ಮೀಟಿಂಗ್ ಪ್ರೊಸೀಡಿಂಗ್ಸ್ ತಮಗೆ ಕಳುಹಿಸಿಕೊಡಲಾಗಿದೆ. ಮಾನ್ಯ ವೊಯಿಲಿ ಅವರೇ ನೀವು ಮುಂದುವರಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮೊದಲು ಈ ಸದನಕ್ಕೆ ಅಕಾಡೆಮಿಕ್ ಆಗಿ ಮಾನ್ಯ ಪ್ರೊಫೆಸರ್ ಸಾಹೇಬರು ಏನು ಹೇಳಿದರು ಅದಕ್ಕೆ ತಲೆಬಾಗುತ್ತೇನೆ. ಆದರೆ ಅವರು ವಿಷದವಾಗಿ ಅರ್ಥೈಸಿ ಹೇಳತಕ್ಕ ಮಾತನ್ನು ಹೇಳಿಲಿಲ್ಲ ೧೯೮೦ರ ಮೊದಲು ಏನು ತೆರಿಗೆಯ ದರ ಇತ್ತು, ಅದನ್ನು ರೆಸ್ಪೂರ್ ಮಾಡತಕ್ಕ ಬಿಲ್. ಇದುಫಾರೆಸ್ಟ್ ಬಿಲ್‌ಗೆ ಸಂಬಂಧಪಟ್ಟ ವಿಚಾರ. ಮಾನ್ಯ ಸಚಿವರು ಬರಲಿ. ಏಕೆಂದರೆ ಅವರಿಗೆ ಸಂಪೂರ್ಣವಾದ ಮಾಹಿತಿ ಇರುತ್ತದೆ. ಅನೇಕ ಮಾಹಿತಿಗಳು ನಮಗೆ ಬೇಕಾಗುತ್ತವೆ. ಈ ಬಿಲ್‌ನಲ್ಲಿ ಇರತಕ್ಕ ದರ ರೆಸ್ಪೋರ್ ಮಾಡತಕ್ಕದಂ. ಬೇರೆ ಬೇರೆ ರಾಜ್ಯಗಳಲ್ಲಿ, ನೆರೆ ರಾಜ್ಯಗಳಲ್ಲಿ ಎಷ್ಟು ದರ ಇದೆ ಎಂಬುದನ್ನು ಮಾನ್ಯ ಸಚಿವರು ಹೇಳಬಹುದು.

SRI A. LAKSHMISAGAR.—The decision to bring down to the level of the present amending portion was taken by the Government which was then in Office in 1980.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್ —ಒಂದು ಮಾತು. ನೀವು ಉತ್ತರ ಕೊಡುವಾಗ ನಮ್ಮದನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾರೋ ಒಬ್ಬ ಹುಚ್ಚು ಮುಂಡೆಗಂಡ ಯಾವಾಗಲೋ ಮಾಡಿದ ದರವನ್ನು ಛೇಂಜ್ ಮಾಡುವುದಕ್ಕೆ ಆಗುವುದಿಲ್ಲವೇನು ನಿಮ್ಮ ಕೈಯಿಂದ ? ಸರಿಯಾದ ವಿಷಯವನ್ನು ಮಾನ್ಯ ಸಚಿವರು ಹೇಳಲಿ. ೮೦ರಲ್ಲಿ ಆಗಿತ್ತು, ೭೦ರಲ್ಲಿ ಆಗಿತ್ತು ಎಂದು ಹೇಳುವುದು ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ವಾಸ್ತವವಾದ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ. The Motor Vehicles Tax on Goods Vehicles were amended with effect from 1st April 1980 by Karnataka Motor Vehicles Taxation (Second Amendment) Act, 1980. The Lorry owners of the represented that the new rates of tax were on the high side and requested the Government for reduction in tax. The Government examined their request and issued administrative instructions to collect the tax at pre 1st April 1980 rates. ನಾವು ಅದನ್ನು ಜಾರಿಗೆ ಕೊಡುತ್ತಿದ್ದೇವೆ. ಯಾರು ಇದ್ದರು ಎಂದು ನಾನು ಹೇಳಲಿಲ್ಲ.

೧೨-೩೦ ಪಿ. ಎಂ.

† ಶ್ರೀ ಆರ್, ವೆಂಕಟರಾಮಯ್ಯ.—ನೀವು ಇದನ್ನು ಬಜೆಟ್ ಟೈಮ್‌ನಲ್ಲಿ ತಂದಿದ್ದೀರಿ. ಟ್ಯಾಕ್ಸ್‌ರೇಟ್ ೭೫% ಇದುದನ್ನು ೧೦% ರೂಪಾಯಿ ಕಡಿಮೆ ಮಾಡಿದ್ದೀರಿ. ಕ್ವಾರ್ಟರ್‌ಗೆ ೯೧% ಇದ್ದುದನ್ನು ೧೨% ಕಡಿಮೆ ಮಾಡಿದ್ದೀರಿ. ಒಂದು ತಿಂಗಳು ಮುಷ್ಕರ ಮಾಡಿದಮೇಲೆ, ದೊಡ್ಡದಾಗಿ ಗಲಾಟೆ ಮಾಡಿದಮೇಲೆ ತಾವು ಒಪ್ಪಿಕೊಂಡಿರಿ. ಈಗ ಪುನ: ಒಂದು ಸಮಸ್ಯೆಯನ್ನು ಇಟ್ಟಿದ್ದೀರಿ. ಅಮೆಂಡ್‌ಮೆಂಟ್ ಮೂವ್ ಮಾಡುತ್ತಿದ್ದೀರಿ. ಇವತ್ತು ಟ್ರಾನ್ಸ್‌ಪೋರ್ಟ್ ಮಿನಿಸ್ಟರು ಇಲ್ಲ, ಅವರು ಬರಲಿ ಎಂದು ಸದಸ್ಯರು ಹೇಳುತ್ತಿದ್ದಾರೆ. ಈಗ ಇದನ್ನು ರಿವೈಸ್ ಮಾಡಿ ೨ ತಿಂಗಳು ಆಯಿತು. ದೊಡ್ಡದಾಗಿ ಒಂದು ತಿಂಗಳಂ ಕರ್ನಾಟಕದಲ್ಲಿ ಲಾರಿಗಳು ನಿಂತಿದ್ದವು. ಈಗಲೂ ಇದನ್ನೇ ಮುಂದುವರಿಸಿಕೊಂಡು ಹೋಗುತ್ತೇವೆಂಬ ಭರವಸೆ ಕೊಡಿ ಎಂದೇ ಹೇಳುತ್ತಿದ್ದಾರೆ. ಈಗ ಒಂದು ಬಿಲ್, ಅನಂತರ ಇದರ ಬಗ್ಗೆ ಇನ್ನೊಂದುಬಿಲ್ ಎಂದು ತರುವುದೆಂ ಬೇಡ. ಇದು ತೊಘಲಕ್ ದರ್ಬಾರ್ ಆಗಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಜೆಟ್ ಆಗುವವರೆಗೆ ಇದು ಪಾಸ್ ಆಗಬೇಕಾಗಿಲ್ಲ. Administrative instructions have already been issued. It is already in force. Let us wait for the Budgei. I am trying to help you with my little experience as Finance Minister. Wait for the Budget. This may be a souace of resource mobilisation for you If you bring this later you will have some elasticity. There is an Inter-State Council. ಆದ್ದರಿಂದ ಅಮೆಂಡ್‌ಮೆಂಟ್ ಮೂವ್ ಮಾಡುವ ಬದಲು ಈ ೮ ವರ್ಷಗಳಲ್ಲಿ ನೆರೆ ರಾಜ್ಯಗಳಲ್ಲಿ ಎಷ್ಟು ದರ ಹೆಚ್ಚು ಮಾಡಿರಬಹುದು ಎಂಬುದನ್ನು ನೋಡಬೇಕು. ಇಂಟರ್‌ಸ್ಟೇಟ್ ಕೌನ್ಸಿಲ್ ಸಭೆ ಆಗಿದೆಯೇ. ಎಷ್ಟು ದರ ಇತ್ತು, ಎಷ್ಟು ವ್ಯತ್ಯಾಸ ಇದೆ ಎಂಬುದನ್ನೆಲ್ಲಾ ವಿಮರ್ಶೆ ಮಾಡಬೇಕು. ಯಾವುದನ್ನೂ ಅಡ್ವಾನ್ಸ್ ಆಗಿ ತಿರ್ಮಾನ ತೆಗೆದುಕೊಳ್ಳಬಾರದು. It has an everlasting influence and impact on the whole economy of the State. It may suffer ಈ ವಿಚಾರದಲ್ಲಿ ಎಷ್ಟು ಹಣ ಹೋಗಂತ್ತದೆ, ಎಷ್ಟು ವ್ಯತ್ಯಾಸ ಇದೆ, ಟ್ರಾನ್ಸ್‌ಪೋರ್ಟ್‌ಗೆ ಎಷ್ಟು ವ್ಯತ್ಯಾಸವಾಗಂತ್ತದೆ ಎಂಬುದನ್ನು ನೋಡಬೇಕು. ಒಂದು ಕಾನೂನು ಮಾಡಿ, ಮುಂತ್ತೆ ಅದನ್ನು ಬದಲಾವಣೆ ಮಾಡುವುದು, ಅದಕ್ಕೆ ಅಮೆಂಡ್‌ಮೆಂಟ್ ತರುವಂಥದ್ದು ಆಗಬಾರದು. ನಾವು ತೊಘಲಕ್ ರೀತಿಯಲ್ಲಿ ಕಾನೂನು ಮಾಡಬಾರದು. ಟ್ಯಾಕ್ಸೇಷನ್ ವಿಷಯದಲ್ಲಿ ಆ ರೀತಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಂತ್ತದೆ.

ಮಾಡಬಾರದು. ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. Why do you chain yourself with this legislation when it can wait. ಸಂಬಂಧಪಟ್ಟ ಸಚಿವರು ಇವತ್ತು ಇಲ್ಲ. ಅವರಿಗೆ ಇದರ ಸಂಪೂರ್ಣವಾದ ಪರ್ಸ್‌ಪೆಕ್ಟೀವ್ ಹಿನ್ನೆಲೆ ಅವರಿಗೆ ಇರುವುದರಿಂದ, ನಾವು ಕೇಳಿದ ಪ್ರಶ್ನೆಗೂ ಅವರು ಉತ್ತರ ಕೊಡುತ್ತಾರೆ. ಇದನ್ನು ಏಕೆ ಮಾಡಿದ್ದೀವೆ ಎನ್ನುವುದನ್ನು ಅವರು ಹೇಳುತ್ತಾರೆ. ಆದುದರಿಂದ ಅಧ್ಯಕ್ಷರೇ, ಇದನ್ನು ಮಾಡಲೇ ಬೇಕೆಂದು ಹೇಳಿದರೂ ಕೂಡ ಮುಂದೆ ಬರುವ ಬಜೆಟ್ ಅಧಿವೇಶನದ ಕಾಲದಲ್ಲಿ ಮಾಡಬಹುದು. You can form it as part of Budget. We are already burdened with so many laws, so many amendments, somany enactments. Public will laugh at us if the amendments like this are brought aga in and again ಇನ್ನೊಂದು ಮೋಟಾರ್ ವೆಹಿಕಲ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ ಬಂದೇ ಬರುತ್ತದೆ. We are bound to introduce some kind of taxation on motor vehicles. ಆದುದರಿಂದ ಇದನ್ನು ಈಗ ಏತಕ್ಕೆ ತರಬೇಕು. ? You introduce as part of that Budget. Why should you waste the time of this House by brining one more amendment when you can incorporate this in the comprehensive amendment. Which Budget does not have any enhancement of taxation. tell me? ಈ ರೀತಿಯ ಯಾವುದೇ ಒಂದು ಬಜೆಟ್ ತೋರಿಸಿ. You are bound to introduce, whether it is reduction or enhancement of taxes in some sector. ಹೀಗಿರುವಾಗ ಇದನ್ನು ಇಲ್ಲಿ ತಂದು why should you create one more burden to the pepole. ಇದಕ್ಕೆ ಎಷ್ಟು ಖರ್ಚಾಗುತ್ತದೆ ಇಲ್ಲಿ ಪಾಸ್ ಆದ ನಂತರ ಅಲ್ಲಿಗೆ ಹೋಗಬೇಕು ಆ ಮನೆಯ ಖರ್ಚು, ಈ ಮನೆಯ ಖರ್ಚು ಎಲ್ಲಾ ಸೇರಿ ಬಿಲ್ ಪಾಸ್ ಮಾಡಲಿಕ್ಕೆ ೮ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಸ್ಟೇಟ್ ಇಷ್ಟು ಕಷ್ಟದಲ್ಲಿರುವಾಗ ಇದನ್ನು ಏತಕ್ಕೆ ಮಾಡುತ್ತೀರಿ ? ಇದರ ಬಗ್ಗೆ ಸಂವತ್ಸರ ಪ್ರಿವೆಜ್ ಬೇಡ. With some experience as Finance Minister I am telling you. After all it is a very trivial matter and we would not have raised it. ಅದೆಲ್ಲಾ ಏತಕ್ಕೆ ಬೇಕು. ಆದುದರಿಂದ ಇದನ್ನು ಈಗ ಬಿಟ್ಟುಬಿಡಿ ಎಂದು ಹೇಳುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂದೀಯ ವ್ಯವಹಾರಗಳ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮೊಯಿಲಿಯವರು ಹೇಳಿದಂತಹ ಮಾತುಗಳನ್ನು ಕೇಳಿದ್ದೇವೆ. ಆದರೆ ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದುದು, ಈ ರೀತಿ ತೆರಿಗೆಯನ್ನು ಬದಲಾವಣೆ ಮಾಡಿ ಸರಕಾರ ಹೊರಡಿಸಿದ ನೋಟಿಫಿಕೇಷನ್ ಬಗ್ಗೆ ಆಕೌಂಟೆಂಟ್ ಜನರಲ್‌ರವರು, ಇದನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮುಂದೆ ತಂದು ರ್‍ಯಾಟಿಫೈ ಮಾಡಬೇಕೆಂದು ಹೇಳಿ ತಮ್ಮ ತಕರಾರನ್ನು ಎತ್ತಿರುವ ಕಾರಣ ಇದನ್ನು ಈ ಸಭೆಯ ಮುಂದೆ ತಂದಿದ್ದೇವೆ. ಅದಕ್ಕೋಸ್ಕರ ಇದು ಅವಶ್ಯಕವಾಗಿ ಆಗಲೇ ಬೇಕಾಗಿದೆ. ಇವತ್ತಾದರೂ ಆಗಲೀ, ನಾಳೆಯಾದರೂ ಆಗಲೀ ಮಾಡಲೇಬೇಕು. ಎಂಟು ವರ್ಷದ ಹಿಂದೆ ಕೊಟ್ಟಿರತಕ್ಕಂಥ ರಿಯಾಯಿತಿ ಇದಾಗಿದೆ. ಆಕೌಂಟೆಂಟ್ ಜನರಲ್‌ರವರು ತಕರಾರು ತೆಗೆದಿರುವುದರಿಂದ ಈ ಪ್ರಸ್ತಾವನೆಯನ್ನು ತಂದಿದ್ದೇವೆ. ದಯವಿಟ್ಟು ಇದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಂಕವನ್ನು ಸಭೆಯು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಂಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಖಂಡ ೨ ಮತ್ತು ೩ ಎರೆಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ನ್ನು ಎರಡೂ ಸೇರಿದಂತೆ ವಿಧೇಯಂಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಂಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಂಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಸಾರಿಗೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಖಾಸಗೀ ಕಾರ್ಯಕಲಾಪಗಳು

ಮದ್ಯಪಾನಕ್ಕೆ ಸಂಬಂಧಿಸಿದಂತೆ ಅದರ ನಿಷೇಧಕ್ಕೆ ಒಂದು ಸಮಿತಿಯು ನೇಮಕದ ಕುರಿತು

೧೯೮೬ನೇ ಫೆಬ್ರುವರಿ ೭ ರಂದು ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರಿಂದ ಮಂಡಿಸಲಾದ ಕೆಳಕಂಡ ನಿರ್ಣಯದ ಮೇಲೆ ಚರ್ಚೆ ಮುಂದುವರಿಸುವುದು.

> ''ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನ ಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಅಧ್ಯಕ್ಷರು.—ಈ ಖಾಸಗೀ ನಿರ್ಣಯದ ಬಗ್ಗೆ ಇದುವರೆವಿಗೂ ಸುಮಾರು ೧೩ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈಗ ಯಾರಾದರೂ ಮಾತನಾಡುವವರಿದ್ದರೆ ಮಾತನಾಡ ಬಹುದು.